3೭

# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1022 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್.ಕೆ (ನಾಮ ನಿರ್ದೇಶಿತರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12/03/2026 |
| ಉತ್ತರಿಸುವ ಸಚಿವರು: | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಹದಿನೈದು ವರ್ಷಗಳಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪುನರ್‌ರಚನೆ / ಅಭಿವೃದ್ಧಿ/ ಸುಧಾರಣೆ ಕುರಿತು ಯಾವುದಾದರೂ ಸಮಿತಿ ಅಥವಾ ಆಯೋಗಗಳನ್ನು ರಚಿಸಲಾಗಿದೆಯೇ : | ಹೌದು. ರಚಿಸಲಾಗಿದೆ. |
| ಆ) | ರಚಿಸಿದ್ದಲ್ಲಿ ಯಾವ ಸಮಿತಿ / ಆಯೋಗವನ್ನು ರಚಿಸಲಾಗಿತ್ತು, ಯಾವ ಉದ್ದೇಶದಿಂದ ರಚಿಸಲಾಗಿತ್ತು : | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪುನರ್ ರಚನೆ ಹಾಗೂ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಗಾಗಿ ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿ ಇವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ರಚಿಸಲಾಗಿತ್ತು. |
| ಇ) | ಈ ಸಮಿತಿ / ಆಯೋಗವು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸರ್ಕಾರದಿಂದ ಎಷ್ಟು ವೆಚ್ಚ ಮಾಡಲಾಗಿದೆ ಹಾಗೂ ಸರ್ಕಾರಕ್ಕೆ ಈ ವರದಿಯನ್ನು ಯಾವಾಗ ಸಲ್ಲಿಸಲಾಗಿದೆ : | ಈ ಸಮಿತಿ/ಆಯೋಗವು ಅಧ್ಯಯನ ಮಾಡಿ ವರದಿ ಸಲ್ಲಿಸುವುದಕ್ಕಾಗಿ ಒಟ್ಟಾರೆ ರೂ.8,33,299/-ಗಳ ವೆಚ್ಚವಾಗಿದೆ. ಸರ್ಕಾರಕ್ಕೆ ವರದಿಯನ್ನು ಜುಲೈ 2017ರ ಮಾಹೆಯಲ್ಲಿ ಸಲ್ಲಿಸಿದೆ. |
| ಈ) | ಈ ವರದಿಯನ್ನು ಅನುಷ್ಠಾನಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ : ಇದ್ದಲ್ಲಿ ಈ ಸಮಿತಿಯ ವರದಿಯ ಶಿಫಾರಸ್ಸುಗಳ ಅನುಷ್ಠಾನಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು) | ಈ ಸಲಹಾ ಸಮಿತಿಯ ವರದಿಯ ಶಿಫಾರಸ್ಸುಗಳ ಬಗ್ಗೆ ಇಲಾಖಾ ಮುಖ್ಯಸ್ಥರಾದ ವಾರ್ತಾ ಆಯುಕ್ತರು ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ನೀಡಿದ್ದು, ಸದರಿ ಶಿಫಾರಸ್ಸುಗಳ ಅನುಷ್ಠಾನದ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |

**ಕಸಿಐ-ಪಿಐಪಿ/55/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ